

ಚಿಟ್ಟೆ ವೀಕ್ಷಿಸುತ್ತಿರುವ ಸಾರ್ವಜನಿಕರು

ಚಳಿಗಾಲದಲ್ಲಿ ಚಳಿಯಿಂದ ತನ್ನನ್ನು ರಕ್ಷಿಸಿಕೊಳ್ಳಲು ಹಿತಕರ ಹವಾಮಾನ ಇರುವ ನ್ಯಾಚುರಲ್ ಬ್ರಿಡ್ಜಸ್ ಪ್ರದೇಶಕ್ಕೆ ಹಾರಿ ಬರುವ ಇವು ಇಲ್ಲಿ ಅಕ್ಟೋಬರ್‌ನಿಂದ ಫೆಬ್ರವರಿ ಮಧ್ಯದ ತನಕ ತಂಗುತ್ತವೆ. ನವೆಂಬರ್‌ನಿಂದ ಡಿಸೆಂಬರ್ ಮಧ್ಯದವರೆಗಂತೂ ಇವುಗಳ ಸಂಖ್ಯೆ ಇನ್ನೂ ಅಧಿಕವಾಗುತ್ತವೆ.

ವಾತಾವರಣದಲ್ಲಿ ಚಳಿ ಕಡಿಮೆಯಾಗುತ್ತಿರುವಂತೆ (ಫೆಬ್ರವರಿ ತಿಂಗಳಲ್ಲಿ) ಇವು ನ್ಯಾಚುರಲ್ ಬ್ರಿಡ್ಜಸ್ ಪ್ರದೇಶವನ್ನು ಬಿಡುತ್ತವೆ. ಕ್ಯಾಲಿಫೋರ್ನಿಯಾ, ಓರೆಗನ್, ವಾಷಿಂಗ್ಟನ್ ರಾಜ್ಯಗಳನ್ನೆಲ್ಲಾ ದಾಟಿ ಮರಳಿ ಕೆನಡ ದೇಶದತ್ತ ಇವುಗಳ ಪ್ರಯಾಣ. ಸುಮಾರು 3000 ಮೈಲು ದೂರದ ಊರಿನತ್ತ. ಆದರೆ ನ್ಯಾಚುರಲ್ ಬ್ರಿಡ್ಜಸ್ ಬಿಟ್ಟ ಕೆಲ ದಿನಗಳಲ್ಲಿ ಹೆಣ್ಣು–ಗಂಡು ಚಿಟ್ಟೆಗಳ ಮಿಲನದಿಂದ ಹೆಣ್ಣು ಚಿಟ್ಟೆ ಗರ್ಭವತಿಯಾಗಿ ಪ್ರಯಾಣ ನಿಂತುಬಿಡುತ್ತದೆ. ಮಿಲ್ಕ್‌ವೀಡ್ ಹೆಸರಿನ ಸಸ್ಯಗಳ ಎಲೆಗಳ ಅಡಿಭಾಗದಲ್ಲಿ ಮೊಟ್ಟೆಗಳನ್ನಿಟ್ಟು ಒಂದೆರಡು ದಿನದಲ್ಲಿ ಸತ್ತುಹೋಗುತ್ತವೆ. ಅಲ್ಲಿಗೆ ಆ ಚಿಟ್ಟೆಗಳ ಪ್ರಯಾಣ ಮುಗಿಯಿತು.

ಹಾಗಾದರೆ ಕೆನಡ ದೇಶಕ್ಕೆ ಹೋಗಿ ತಲುಪುವ ಚಿಟ್ಟೆಗಳು ಯಾವುವು? ಅದೇ ವಿಶೇಷ. ಎಲೆಗಳಿಗಂಟಿಕೊಂಡ ಮೊಟ್ಟೆಗಳು ಸುಮಾರು ಹತ್ತು ದಿನ ಕಳೆದು ಒಡೆದು ಮರಿಹುಳ ಹೊರಬರುತ್ತದೆ. ಅದು ಒಂದೇ ಸವನೆ ಎಲೆಗಳನ್ನು ತಿನ್ನುತ್ತ ಶೀಘ್ರವಾಗಿ ಬೆಳೆಯುತ್ತದೆ. ಮರಿಹುಳ ಕೆಲ ವಾರದಲ್ಲೇ ಬೆಳೆದು ದೊಡ್ಡ ಕಂಬಳಿಹುಳವಾಗುತ್ತದೆ. ತಿನ್ನುವುದನ್ನು ನಿಲ್ಲಿಸಿ ತನ್ನದೇ ಹೊರಚರ್ಮದಿಂದ ಒಂದು ಕೋಶ ನಿರ್ಮಾಣ ಮಾಡುತ್ತದೆ. ಸುಮಾರು ಎರಡು ವಾರ ತನ್ನ ಕೋಶದೊಳಗೆ ಕಳೆವ ಕಂಬಳಿಹುಳ ಅದನ್ನೊಡೆದು ಹೊರಬರುವಾಗ ಸುಂದರ ಮೊನಾರ್ಕ್ ಚಿಟ್ಟೆಯಾಗಿ ರೂಪಾಂತರಗೊಂಡಿರುತ್ತದೆ. ಮೊಟ್ಟೆಯಿಂದ ಚಿಟ್ಟೆಯಾಗಲು ಸುಮಾರು ಒಂದು ತಿಂಗಳ ಅವಧಿ ಬೇಕಾಗುತ್ತದೆ.

ಅಂದರೆ ಫೆಬ್ರವರಿ– ಮಾರ್ಚ್‌ನಲ್ಲಿ ನ್ಯಾಚುರಲ್ ಬ್ರಿಡ್ಜಸ್‌ನಿಂದ ಹೊರಟ ತಾಯಿ ಚಿಟ್ಟೆಯ ಮರಿಗಳು ಏಪ್ರಿಲ್ ತಿಂಗಳಲ್ಲಿ ಚಿಟ್ಟೆಯಾಗುತ್ತವೆ. ಆದರೆ ಇವಕ್ಕೆ ತಾಯಿ–ತಂದೆಯರ ಸಂಪರ್ಕವಿಲ್ಲ. ಏನು ಮಾಡಬೇಕು, ಎಲ್ಲಿಗೆ ಹೋಗಬೇಕು ಎಂದು ದಾರಿ ತೋರಿಸುವವರಿಲ್ಲ. ಆದರೂ ಈ ಹೊಸ ತಲೆಮಾರಿನ ಚಿಟ್ಟೆ ತನ್ನ ತಾಯಿ–ತಂದೆಯ ಅಪೇಕ್ಷೆಯನ್ನು ಅರಿತವರಂತೆ ಅದೇ ದಾರಿಯಲ್ಲಿ ಉತ್ತರ ದಿಕ್ಕಿಗೆ ಪ್ರಯಾಣ ಹೊರಡುತ್ತವೆ.

ಈ ಮೊದಲ ತಲೆಮಾರಿನ ಚಿಟ್ಟೆ ಸುಮಾರು ಒಂದು ತಿಂಗಳಲ್ಲೇ ಗರ್ಭವತಿಯಾಗುತ್ತದೆ. ತನ್ನ ತಾಯಿ ಮಾಡಿದ ಹಾಗೆ ಇದು ಕೂಡಾ ಮಿಲ್ಕ್‌ವೀಡ್ ಸಸ್ಯಗಳನ್ನು ಹುಡುಕಿ ಮೊಟ್ಟೆಯಿಟ್ಟು ಸತ್ತು ಹೋಗುತ್ತದೆ.

ಮೊದಲ ತಲೆಮಾರಿನ ಚಿಟ್ಟೆ ಸತ್ತ ಸುಮಾರು ಒಂದು ತಿಂಗಳಲ್ಲಿ ಮುಂದಿನ ತಲೆಮಾರಿನ ಚಿಟ್ಟೆಗಳು ಹುಟ್ಟಿ ಬರುತ್ತವೆ. ಅಂದರೆ ನ್ಯಾಚುರಲ್ ಬ್ರಿಡ್ಜಸ್ ಚಿಟ್ಟೆಗಳ ಎರಡು ತಲೆಮಾರಿನ ನಂತರ ಹುಟ್ಟಿ ಬಂದ ಚಿಟ್ಟೆಗಳು ಸುಮಾರು ಜೂನ್‌ನಲ್ಲಿ ಕಾರ್ಯಕ್ಕೆ ಸಿದ್ಧ. ತಮ್ಮ ಅಜ್ಜ–ಅಜ್ಜಿಯ ಗುರಿಯನ್ನರಿತವರಂತೆ ಇವು ಕೂಡಾ ಉತ್ತರಕ್ಕೆ ಪ್ರಯಾಣ ಹೊರಡುತ್ತವೆ. ಇವು ಕೆನಡ ದೇಶವನ್ನು ತಲುಪುವಷ್ಟರಲ್ಲಿ ಬೇಸಗೆ ಆರಂಭವಾಗಿರುತ್ತದೆ. ಈಗ ಇವು ಅಜ್ಜ–ಅಜ್ಜಿ ತಂಗಿದ ನ್ಯಾಚುರಲ್ ಬ್ರಿಡ್ಜಸ್ ಊರಿನಿಂದ ಸುಮಾರು 3,000 ಮೈಲು ದೂರದಲ್ಲಿ. ಇವಕ್ಕೆ ಅಜ್ಜ–ಅಜ್ಜಿ ಯಾರೆಂದು ಗೊತ್ತೇ ಇಲ್ಲ. ಆ ಊರಿನ ಪರಿಚಯವೇ ಇಲ್ಲ. ಇವು ಸುಮಾರು ಒಂದು ತಿಂಗಳ ನಂತರ ಮಿಲ್ಕ್‌ವೀಡ್ ಎಲೆಗಳಡಿಯಲ್ಲಿ ಮೊಟ್ಟೆಗಳನ್ನಿಟ್ಟು ಸತ್ತುಹೋಗುತ್ತವೆ.